# ಕಂಡೆ ನಾ ಕನಸಿನಲಿ ಗೋವಿಂದನ ಕನಕ ರತ್ನದ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi.
4. **Note:** The wordings are as per Ref. 1. The wordings in Ref. 2 are same as in Ref. 1 except few differences which are marked in yellow highlights. The wordings in Ref. 3 are almost similar to Ref. 2.
5. **Note:** Singer has followed lyrics in Ref.1.

(ಹಂಪೆಯಲ್ಲಿ ತುಂಗಭದ್ರೆಯ ತೀರದಲ್ಲಿ ಇರುವ ವಿಜಯ ವಿಠಲನನ್ನು ಬಣ್ಣಿಸುತ್ತಿದ್ದಾರೆ)

ರಾಗ: ಶಂಕರಾಭರಣ ತಾಳ: ಅಟ

ಕಂಡೆ ನಾ ಕನಸಿನಲಿ ಗೋವಿಂದನ || ಪ ||

ಕಂಡೆನಾ ಕನಸಿನಲಿ ಕನಕ ರತ್ನದ ಮಣಿಯ (ಖಣಿಯ)
ನಂದನ ಕಂದ ಮುಕುಂದನ ಚರಣವ || ಅಪ ||

ಅಂದುಗೆ ಕಿರುಗೆಜ್ಜೆ ಘಲಿರೆಂಬ ನಾದದಿ (ವಾದ್ಯದಿ)
ಬಂದು ಕಾಳಿಂಗನ ಹೆಡೆಯನೇರಿ
ಧಿಂ ಧಿಮಿ ಧಿಮಿಕೆಂದು ತಾಳ ಗತಿಗಳಿಂದಾ
ನಂದದಿ ಕುಣಿವ ಮುಕುಂದನ ಚರಣವ || ೧ ||

ಉಟ್ಟ ಪೀತಾಂಬರ ಉಡಿಯ ಕಾಂಚಿಯ ಧಾಮ
ತೊಟ್ಟ ಮುತ್ತಿನ ಹಾರ ಕೌಸ್ತುಭವು
ಕಟ್ಟಿದ ವೈಜಯಂತಿ ತುಳಸಿ ವನಮಾಲೆ
ಇಟ್ಟ ದ್ವಾದಶನಾಮ ನಿಗಮಗೋಚರನ || ೨ ||

ಕಿರು ಬೆರಳಿನ ಮುದ್ರೆಯುಂಗುರ ಮುಂಗಡೆ (ಮುಂಗೈಯ)
ಕರದಲ್ಲಿ ಕಂಕಣ ನಳಿ ತೋಳುಗಳ
ವರ ಚತುರ್ಭುಜ ಶಂಖ ಚಕ್ರದಿ ಮೆರೆವನ
ನಿರುತದಿ ಒಪ್ಪುವ ಕರುಣಾ ಮೂರುತಿಯ || ೭ ||

ಬಣ್ಣದ ತುಟಿ ಭಾವ ರಚನೆಯ ಸುಲಿಪಲ್ಲ
ಸಣ್ಣ ನಗೆಯ ನುಡಿ ಸವಿ ಮಾತಿನ
ಪುಣ್ಯ ಚರಿತ್ರನ ಪೊಳೆವ ಕಿರೀಟನ
ಕಣ್ಣು ಮನ ತಣಿಯದ (ದಣಿಯದು) ಕಂಸಾರಿ ಕೃಷ್ಣನ || ೪ ||

ಮಂಗಳ ವರ ತುಂಗಭದ್ರದಿ ಮೆರೆವನ
ಅಂಗಜ ಪಿತ ಶ್ರೀ ಲಕ್ಷ್ಮೀಪತಿಯ
ಶೃಂಗಾರ ಮೂರುತಿ ಪುರಂದರ ವಿಠಲನ
ಕಂಗಳಿಂದಲಿ ಕಂಡೆ ಹಿಂಗಿತು ಭವಭಯ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

'ಕನಸು ಮನಸಿನೊಳೆಲ್ಲ ಕನವರಿಸಿ ವಿಷಯಗಳ' ಎಂಬುದು ಸಾಮಾನ್ಯ ಜನರ ವರ್ಣನೆ; ಸಾಧಕರಿಗೆ 'ಕನಸು ಮನಸಿನೊಳೆಲ್ಲ ಹರಿಯ ಸ್ಮರಣೆ'. ಇಂದ್ರಿಯಾದಿ ವ್ಯಾಪಾರವಿಲ್ಲದೆ ಮನಸ್ಸೊಂದೇ ಕೆಲಸಮಾಡುವ ಸ್ವಪ್ನಾವಸ್ಥೆಯಲ್ಲಿಯೂ ಜಾಗತ್ಪ್ರಚೋದಕನಾದ ವಿಶ್ವನಾಯಕ ಪರಮಾತ್ಮನೇ ತೈಜಸ ರೂಪದಿಂದ ಇರುತ್ತಾನೆ; ಕನಸಿನ ದ್ರವ್ಯವೂ ಅವನೇ, ಕ್ರಿಯೆಯೂ ಅವನೇ, ಗುಣವೂ ಅವನೇ. ಬಿಂಬೋಪಾಸಕದ ಧ್ಯಾನ ನಿದ್ರೆಯಲ್ಲೂ ಸಾಗುವುದು. ಜೀವರಿಗೆ ತಂತಮ್ಮ ಸಾಧನೆಯ ಹಂತದಂತೆ ಬಿಂಬರೂಪಿ ಪರಮಾತ್ಮನು ತೋರಿಕೊಳ್ಳುತ್ತಾನೆ. ಜಿಜ್ಞಾಸು ಸಾಧಕರಿಗೆ ಶರೀರೇಂದ್ರಿಯ ದೇವತಾದಿ ಭಾವರೂಪಾತ್ಮಕನಾಗಿಯೂ, ಜ್ಞಾನಿ ಸಾಧಕರಿಗೆ ರಾಮ, ಕೃಷ್ಣ ಮೊದಲಾದ ಅವತಾರ ರೂಪಾತ್ಮಕನಾಗಿಯೂ, ಅಧ್ಯಾತ್ಮ ನಿಷ್ಠರಿಗೆ ಪಂಚವ್ಯೂಹ ಮೂರ್ತಿಗಳ ರೂಪದಲ್ಲಿಯೂ ಅವರವರ ಅಂತರಂಗದಲ್ಲಿಯೇ ಕಾಣಿಸಿಕೊಳ್ಳುತ್ತಾನೆ.

**ಕನಸಿನಲಿ** = ಕಣ್ಣು ಮುಚ್ಚಿ ಧ್ಯಾನ ಮಾಡುವಾಗ

**ಕಾಳಿಂಗ** = ಇವನಿಗೆ ಕಾಳಿಯನೆಂಬ ಹೆಸರಿದೆ. ಈತನು ಕದ್ರು - ಕಶ್ಯಪರ ಮಗ. ಸರ್ಪ ಕುಲದವನು. ಗರುಡನ ಭಯದಿಂದ ಕಾಳಿಂದಿಯ (ಯಮುನೆ) ಮಡುವಿನಲ್ಲಿ ಅಡಗಿದ್ದ. ಇವನ ವಿಷದಿಂದ ಗೋಕುಲದ ಗೋವಳರಿಗೆಲ್ಲ ತೊಂದರೆಯಾಗಲು ಶ್ರೀ ಕೃಷ್ಣನು ಇವನನ್ನು ಹಿಂಸಿಸಿ ರಮಣಕ ದ್ವೀಪಕ್ಕೆ ಕಳಿಸಿದನು. (ಈ ದ್ವೀಪವು ಶಾಲ್ಮಲೀ ದ್ವೀಪದ ಭಾಗ. ಇದನ್ನು ಪ್ರೀಯವ್ರತ ರಾಜನ ಮಗನಾದ ಯಜ್ಞಬಹೂ ಎಂಬುವನು ಆಳುತ್ತಿದ್ದ)

**ತಾಳ ಗತಿಯಿಂದ** = ತಾಳ ಲಯಕ್ಕೆ ಹೊಂದಿ

**ದ್ವಾದಶ ನಾಮ** = ಹೊಟ್ಟೆಯ ಮೇಲೆ ಮೂರು; ಎದೆಯ ಮೇಲೆ ಒಂದು; ಬಲ ಮೊಲೆಯ ಮೇಲೆ ಒಂದು; ರಟ್ಟೆಗಳ ಮೇಲೆ ಎರಡು; ಬೆನ್ನುಹುರಿಯ ಮೇಲೆ ಒಂದು; ಕೊರಳೊಳಗೆ - ಎಡ ಬಲ ಮತ್ತು ನಡುವೆ - ಹೀಗೆ ಮೂರು; ಹಣೆಯ ಮೇಲೆ ಒಂದು

**ಮುಂಗಡೆಕರ** = ಕೈ ಮಣಿಕಟ್ಟು

**ನಾಳಿ** = ಉದ್ದವಾದ

**ಬಣ್ಣದ ತುಟಿ** = ಕೆಂದುಟಿ

**ಭಾವ ರಚನೆಯ** = ಭಾವವನ್ನು ಪ್ರಕಟಿಸುವ

**ಸುಲಿಪಲ್** = ನಿರ್ಮಲವಾದ ಹಲ್ಲು

**ಕಂಸ** = ಯದುವಂಶದ ಉಗ್ರಸೇನನ ಮಗ. ದೇವಕಿಯ ಅಣ್ಣ. ಪೂರ್ವ ಜನ್ಮದಲ್ಲಿ ಇವನು ಕಾಲನೇಮಿ ಎಂಬ ರಾಕ್ಷಸನು. ಇವನು ಜರಾಸಂಧನ ಮಕ್ಕಳಾದ ಅಸ್ತಿ - ಪ್ರಾಸ್ತಿಯರನ್ನು ಮದುವೆಯಾಗಿದ್ದನು. ವಾಸುದೇವನು ಇವನ ಪ್ರಧಾನಿ. ವಾಸುದೇವ - ದೇವಕಿಯರ ಎಂಟನೆಯ ಸಂತಾನದಿಂದ ಮರಣ ಬರುವುದೆಂಬುದನ್ನು ತಿಳಿದು ಅವರನ್ನು ಸೆರೆಯಲಿಟ್ಟನು. ಕೊನೆಗೆ ಇವನ ಲೋಕ ಪೀಡೆನೆಗಾಗಿ ಕೃಷ್ಣನು ಇವನನ್ನು ಕೊಂದನು.

**ಕಂಸಾರಿ** = ಕೃಷ್ಣ

**ವರ ತುಂಗಭದ್ರದಿ ಮೆರೆವನ** = ಹಂಪಿಯಲ್ಲಿರುವ ಕೃಷ್ಣನ ಗುಡಿ

**ಅಂಗಜಪಿತ** = ಕಾಮನ ತಂದೆ, ಕೃಷ್ಣ

**Classification:** Keerthane
**Ankita:** purandara vittala
**Location:** NA
**Category:** bimbaroopa, bhakti
**Sub-Category:** kanasu, Vishnu, kalinga, Ananda, tulasi, ungura, shankha, chakra, punya, kannu, Krishna, nadi, bhava, mangala, bangara, bimbaroopa, govinda, ratna, gejje, mukunda, abharana, karuna, nage, punya, bhaya,
**Pravachana:** NA
**Explanation:** NA